ಶಿಡ್ಲಘಟ್ಟ ತಾಲ್ಲೂಕು ಹಳ್ಳಿಗಳಲ್ಲಿ ಕುಡಿಯುವ ನೀರಿನ ಬಗ್ಗೆ.

೭೭ ಶ್ರೀ ಮುನಿಯಪ್ಪ (ಶಿಡ್ಲಘಟ್ಟ).— ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ .—

(ಅ) ಶಿಡ್ಲಘಟ್ಟ ತಾಲ್ಲೂಕಿನಲ್ಲಿ ಇಲ್ಲಿಯವರೆವಿಗೂ ರಾಷ್ಟ್ರೀಯ ಗ್ರಾಮಾಂತರ ಕುಡಿಯುವ ನೀರಿನ ಯೋಜನೆಯಲ್ಲಿ ಎಷ್ಟು ಹಳ್ಳಿಗಳಿಗೆ ಉಪಯೋಗ ಲಭಿಸಿದೆ ,

(ಆ) ಹಾಗಿದ್ದಲ್ಲಿ ಯಾವ ಯಾವ ವರ್ಷದಲ್ಲಿ ಯಾವ ಯಾವ ಹಳ್ಳಿಗಳಿಗೆ ಮಂಜೂರು ಆಗಿದೆ ,

(ಇ) ಮಂಜೂರಾಗಿರುವ ಎಲ್ಲಾ ಕೆಲಸ ಪೂರ್ಣಗೊಂಡಿದೆಯೇ ,

(ಈ) ಶಿಡ್ಲಘಟ್ಟ ತಾಲ್ಲೂಕಿಗೆ ಜಿಲ್ಲಾ ಅಭಿವೃದ್ಧಿ ಸಮಿತಿಯಿಂದ ಬಂದಿರುವ ರಾಷ್ಟ್ರೀಯ ಗ್ರಾಮಾಂತರ ಕುಡಿಯುವ ನೀರಿನ ಯೋಜನೆಯ ಪರ್ಯಾಲೋಚನೆಗಳ ಸಂಖ್ಯೆ ಎಷ್ಟು,

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಮಂತ್ರಿಗಳು).—

(ಅ) ೨೦

(ಆ) ಪಟ್ಟಿಯನ್ನು ಲಗತ್ತಿಸಿದೆ.

(ಇ) ಇಲ್ಲ

(ಈ) ೯.

Statement showing the number of NRWS Schemes sanctioned in Sidlaghatta Taluk, Kolar District.

Sl. No.	Name of the Scheme	Year of sanction	Year of commission	Remarks
1	2	3	4	5
1.	Melur	1955	1960	
2.	Jangamakote	1955	1960	
3.	Bhakthrahalli	1955	1961	
4.	Sadali	1964	1969	
5.	Doddur	1971	1976	
6.	Chimangala	1971	1976	
7.	Basettihalli	1971	1976	
8.	Malamachanahalli	1979	1981	
9.	Asemodagu	1980	1982	

1	2	3	4	5
10.	Melur (Aug)	1970	1982	
11.	Kothanur	1979	Works under progress	
12.	Bodgur (Aug)	1971	-do-	
13.	Varadanayakanahalli	1980	—	
14.	Nagamangala	1981	—	
15.	Muhkur	1981	—	
16.	Ganjijunte	1981	—	
17.	Jangamakote (Aug)	1982	—	
18.	Sadali (Aug)	1982	—	
19.	Bhaktaravalli (Aug)	1981	—	
20.	Mallur	1981	—	

ಶಿಡ್ಲಘಟ್ಟ ತಾಲೂಕಿನ ಗ್ರಾಮಗಳಿಗೆ ಪಶು ವೈದ್ಯ ಶಾಲೆಗಳ ಮಂಜೂರಾತಿ

೭೯ ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ).— ಪಶುಸಂಗೋಪನಾ, ಪಶುವೈದ್ಯ ಹಾಗೂ ತೋಟಗಾರಿಕೆ ಮಂತ್ರಿಗಳು ಈ ವಿಷಯವನ್ನು ದಯವಿಟ್ಟು ತಿಳಿಸುವರೇ :—

ಶಿಡ್ಲಘಟ್ಟ ತಾಲ್ಲೂಕಿನಲ್ಲಿ ಯಾವ ಯಾವ ಸಾಲಿನಲ್ಲಿ ಯಾವ ಯಾವ ಹಳ್ಳಿಗಳಿಗೆ ಗ್ರಾಮೀಣ ಪಶು ವೈದ್ಯ ಆಸ್ಪತ್ರೆ ಕೇಂದ್ರಗಳು ಮಂಜೂರಾಗಿವೆ?

* * *

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜೂನಿಯರ್ ಕಾಲೇಜುಗಳಲ್ಲಿ ಉಪನ್ಯಾಸಕರ ಹುದ್ದೆಗಳ ಬಗ್ಗೆ.

೯೧. ಶ್ರೀ ವಿ ಎಸ್. ಆಚಾರ್ಯ (ಉಡುಪಿ) ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ದಕ್ಷಿಣ ಕನ್ನಡ ಜಿಲ್ಲೆಯ ಜೂನಿಯರ್ ಕಾಲೇಜುಗಳಲ್ಲಿ ಮಂಜೂರಾಗಿರುವ ಉಪನ್ಯಾಸಕರ ಹುದ್ದೆಗಳೆಷ್ಟು ?

(ಆ) ಆ ಹುದ್ದೆಗಳಲ್ಲಿ ದಿನಾಂಕ, ೧-೧-೧೯೮೩ರಿಂದ ಎಷ್ಟು ಖಾಲಿ ಇವೆ ?

(ಇ) ಎಷ್ಟು ಜೂನಿಯರ್ ಕಾಲೇಜುಗಳಲ್ಲಿ ಪ್ರಿನ್ಸಿಪಾಲರ ಹುದ್ದೆ ಖಾಲಿ ಇವೆ ?

(ಈ) ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಏನು ಕ್ರಮ ಕೈಗೊಳ್ಳಲಿದೆ ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೨೮೧ ಉಪನ್ಯಾಸಕರ ಹುದ್ದೆಗಳು ಮಂಜೂರಾಗಿವೆ.

(ಆ) ೧೬ ಉಪನ್ಯಾಸಕರ ಹುದ್ದೆಗಳು ಖಾಲಿ ಇವೆ.

(ಇ) ೨೧ ಜ್ಯೂನಿಯರ್ ಕಾಲೇಜುಗಳಲ್ಲಿ ಪ್ರಿನ್ಸಿಪಾಲರ ಹುದ್ದೆಗಳು ಖಾಲಿ ಇವೆ.

(ಈ) ಹಿರಿಯ ಉಪನ್ಯಾಸಕರುಗಳಿಗೆ ಬಡ್ತಿ ನೀಡಿ ಪ್ರಾಚಾರ್ಯರ ಹುದ್ದೆಗಳನ್ನು ಭರ್ತಿ ಮಾಡುವುದೆಂದು ನಿರ್ಧರಿಸಲಾಗಿದೆ. ಇದಕ್ಕೆ ಬೇಕಾದ ಸಿ ಅಂಡ್ ಆರ್ ನಿಯಮಾವಳಿ ತಿದ್ದುಪಡಿಯಾದ ಕೂಡಲೇ ಹುದ್ದೆಗಳನ್ನು ಭರ್ತಿಗೊಳಿಸಲಾಗುವುದು.

*Reply not received.